
ಆಗಸ್ಟ್ 22, 1993


# ಕರ್ಮವೀರ

ತುಂಬಿದ ಮನೆಗೊಂದು ಚೆಂದದ ಸಾಪ್ತಾಹಿಕ



ಉತ್ತರ ಕನ್ನಡದ
ರುದ್ರ ರಮಣೀಯ
ಕಣಿವೆಗಳು






## ರಾಯರು ಗೆದ್ದರು ಆದರೆ ಉಳಿಯುವರೇ?

# ಕರ್ಮವೀರ

ತುಂಬಿದ ಮನೆಗೊಂದು ಚೆಂದದ ಸಾಪ್ತಾಹಿಕ

ಆಗಸ್ಟ್ 22, 1993


## ಬೆಳಕಿಂಡಿ





**11** ರಾಯರು ಗೆದ್ದರು ಆದರೆ ಉಳಿಯುವರೇ?
• ಎನ್.ಆರ್. ವಿಜಯಪುರ್



**18** ಅಮೂಲ್ಯ ಭಂಡಾರದ ಭಂಡಾರ್‌ಕರ್!
• ಡಾ. ನಾ. ದಾಮೋದರ ಶೆಟ್ಟಿ



**32** ಮಲೆನಾಡಿನ ಗರ್ಭದಲ್ಲಿ ನಿಂತ ಇಕ್ಕೇರಿ ದೇವಾಲಯ
• ಟಿ. ಮಹಾಬಲೇಶ್ವರ ಭಟ್



**34** ಈ 'ಮುಕ್ತಿಧಾಮ'ದ ಬಗ್ಗೆ ನಿಮಗೆ ಗೊತ್ತೇ?
• ಕೆ.ಎಚ್. ಸಾವಿತ್ರಿ


ಹಿಂಬದಿಪುಟ ವರ್ಣಚಿತ್ರ:
ಶೃಂಗೇರಿ ಶ್ರೀ ಶಾರದಾಂಬಾ
ದೇವಾಲಯದ ಶಿಖರ
ಚಿತ್ರ: ಬಾಲುದೇರಾಜೆ, ಸುಳ್ಯ

ಕಥೆ, ಹಾಸ್ಯಲಾಸ್ಯ, ಲಲಿತ ಪ್ರಬಂಧ:


26: ಬಾಡಿಗಾರ್ಡ್ಸ್- ಬಿ.ಎಲ್. ವೇಣು
30: ನೀವೇನೂ ತಿಳ್ಕೊಳ್ಳೋದಿಲ್ಲಾ ಅಂತಂದ್ರು... -ಈರಪ್ಪ ಎಂ. ಕಂಬಳಿ
36: ತಿರುಗುಬಾಣ
- ರಮೇಶ್ ದೇಶಪಾಂಡೆ
38: ಮುಗಿಯಿತು
- ಗುಡಿಬಂಡೆ ಪೂರ್ಣಿಮಾ


ವಾರದ ವಿಶೇಷ:


41: ಉಚಲ್ಯಾ - ಬದುಕಿಲ್ಲದವನ ಬದುಕಿನ ಕಥೆ
• ಚಂದ್ರಕಾಂತ ಪೋಕಳೆ
45: ಮ್ಯಾಗ್ಸೇಸೆ ಪುರಸ್ಕಾರದ ಡಾ. ಭಾನೂ ಕೊಯಾಜಿ
• ಶ್ರೀ ಹಾ. ಪುನೆ
48: ಮುತ್ತು ಬೆಳೆಯುವುದು ಹೇಗೆ?
• ಅಮೂಲ್ಯ
50: ತಬಲಾ: ಸಂಗೀತಕ್ಕೊಂದು ಸೇತುವೆ
• ಎ. ಕರುಣಾನಿಧಿ
51: ಕೇರಳದ ವರ್ಣರಂಜಿತ 'ತ್ರಿಶೂರ್ ಪೂರಂ'
• ಡಾ. ಅಶೋಕ್ ಕುಮಾರ್
54: ಉತ್ತರ ಕನ್ನಡದ ರುದ್ರರಮಣೀಯ ಕಣಿವೆಗಳು
• ಟಿ.ಎಂ. ಸುಬ್ಬರಾಯ


ಇತರ:


4: ನಿಮ್ಮಿಂದ 6: ಇವರು 7: ಸಮಕ್ಷಮ 8: ಉತ್ತರೆ 53: ಪದಸಂಪದ 57: ವಾರಫಲ 59: ಪಕ್ಷಿನೋಟ - ಮತ್ತೆ ಬಂದ ಅಲ್ಲಾವುದ್ದೀನ್ 60: ಚಲಿಪಿಲಿ 62: ನಾವು ನಮ್ಮಿಷ್ಟ 63: ನಿಮ್ಮ ಕಂದ 64: ಬೆಳ್ಳಿಚುಕ್ಕಿ 66: ಆಹಾ ಸುದ್ದಿ!


ಅಂಕಣಗಳು:


9: ಪ್ರಚಲಿತ (ನಿದ್ರಿಸುತ್ತಿರುವ ಮಂಡಳಿ ಆಯೋಗಗಳು - ಸಿ.ಎಂ. ರಾಮಚಂದ್ರ)
20: ಎನ್ನೇನಪ್ರಕಾರೇಣ (ಹುಬ್ಬಳ್ಳಿ-ಧಾರವಾಡ ಲೋಕಲ್ ಗಾಡಿಗಳು - ಎನ್ನೆ)
42: ಯೋಗಕ್ಷೇಮ (ಕಬ್ಬಿಣ ಮತ್ತು ಆರೋಗ್ಯ -ಡಾ.ಸಿ.ಆರ್. ಚಂದ್ರಶೇಖರ್)
46: ಪುಸ್ತಕ ಪ್ರಸ್ತಾಪ (ಆಧುನಿಕ ಅನುಭಾವಿಯ ವಚನಗಳು - ಡಾ. ಹಾ.ಮಾ. ನಾಯಕ)


ಧಾರಾವಾಹಿ:


22: ಅಮೃತಬಿಂದು -ಈಚನೂರು ಶಾಂತ

## ಪುಸ್ತಕ ಪ್ರಸ್ತಾಪ



● ಹಾ.ಮಾ. ನಾಯಕ

# ಆಧುನಿಕ ಅನುಭಾವಿಯ ವಚನಗಳು

ಇಂದಿನ ವಚನಕಾರರಲ್ಲಿ ಒಬ್ಬರಾದ ನಮ್ಮ ಹಿರಿಯ ಲೇಖಕ ಡಾ. ಸಿದ್ಧಯ್ಯ ಪುರಾಣಿಕ ಅವರು ತಮ್ಮ ಮೊದಲನೆಯ ವಚನ ಸಂಕಲನ 'ವಚನೋದ್ಯಾನ'ವನ್ನು ಸುಮಾರು ಹದಿನೈದು ವರ್ಷಗಳ ಹಿಂದೆಯೇ (೧೯೭೭) ಪ್ರಕಟಿಸಿದ್ದರು. ಅದರಲ್ಲಿ ಅವರು ಹೇಳಿಕೊಂಡಿದ್ದರು: "ನಂಬಿದರೆ ನಂಬು, ನಂಬದಿರೆ ಬಿಡು ಓದುಗ-ನನಗೆ ವಚನಗಳನ್ನು ರಚಿಸಬೇಕೆಂಬ ಚಪಲವೇ ಇರಲಿಲ್ಲ. ಆ ಬಾನೆತ್ತರದ ವ್ಯಕ್ತಿತ್ವದ, ಸಾಗರೋಪಮ ಅನುಭಾವಶ್ರೀಯ ಅಂದಿನ ವಚನಕಾರರೆಲ್ಲಿ, ಈ ಮರವೆಯ ಮರುಳನೆಲ್ಲಿ? ಹೀಗಿದ್ದೂ ಹವ್ಯಾಸವಿದು ಹಠಾತ್ತಾಗಿ ಹಾರಿಬಂದು ನನ್ನ ಹೆಗಲೇರಿ ಕುಳಿತಿತು! ಕಲಬುರಗಿ ವಿಭಾಗದ ಶಿಕ್ಷಕ ಮಿತ್ರರ ಮುಖ ಪತ್ರಿಕೆಯಾದ 'ಜೀವನ ವಿಕಾಸ'ಕ್ಕೆ ಆ ಭಾಗದವನಾದ ನಾನು ಪ್ರತಿ ತಿಂಗಳೂ ಏನಾದರೂ ಕಳಿಸಲೇ ಬೇಕೆಂದು ಹತ್ತು ವರ್ಷಗಳ ಹಿಂದೆ ಹಟ ಹಿಡಿದರು ಹಲವು ಗೆಳೆಯರು. ತಿಂಗಳು ತಿಂಗಳೂ ಏನನ್ನು ಕಳಿಸಬಲ್ಲೆನೆಂದು ಯೋಚನೆಗೊಳಗಾಗಿದ್ದಾಗ ಎಡೆಯೂರಿನ ಶಿವಯೋಗೀಶ್ವರ ಸಿದ್ಧಲಿಂಗೇಶ್ವರರ ದೇವಾಲಯದಲ್ಲಿ ಇದ್ದಕ್ಕಿದ್ದಂತೆ ಎರಡು ವಚನಗಳು ಸ್ಫುರಿಸಿದುವು. ಸರಿ, ಪ್ರತಿ ತಿಂಗಳೂ ಐದ್ಯೆದು ವಚನಗಳನ್ನೇ ಕಳಿಸುತ್ತ ಹೋಗುವುದೆಂದು ತೀರ್ಮಾನಿಸಿದೆ."

ಅದೊಂದು ಶುಭಕ್ಷಣವಿರಬೇಕು. ಇಪ್ಪತ್ತೈದು ವರ್ಷಗಳೇ ಕಳೆದಿವೆ. ಪುರಾಣಿಕರ ವಚನ ರಚನೆಗೆ ಕಾರಣವಾದ ಆ 'ಜೀವನ ವಿಕಾಸ' ನಿಯತಕಾಲಿಕ ಈಗ ಜೀವಂತವಾಗಿದೆಯೋ ಇಲ್ಲವೋ, ಪುರಾಣಿಕರ ವಚನ ರಚನೆ ಮಾತ್ರ ಸತತವಾಗಿ ನಡೆದಿದೆ! ೧೯೭೭ ರಲ್ಲಿ ಅವರು ತಮ್ಮ ವಚನಗಳ ಮೊದಲನೆಯ ಸಂಕಲನವನ್ನು ಪ್ರಕಟಿಸಿದರು. ಅದಕ್ಕಾಗಿ ಅವರಿಗೆ ಭಾರತೀಯ ಭಾಷಾ ಪರಿಷತ್ತಿನ ಮೊದಲನೆಯ ಕನ್ನಡ ಪ್ರಶಸ್ತಿ ಲಭಿಸಿತು; ಕೀರ್ತಿ ಪ್ರತಿಷ್ಠೆಗಳೂ ಹೆಚ್ಚಿದವು. ಈ ಸಂಕಲನ 'ವಚನೋದ್ಯಾನ'. "ಈ ಶತಮಾನದ ವಚನ ಸಾಹಿತ್ಯದಲ್ಲೊಂದು ಗೌರೀಶಂಕರವೆಂದು ಹೇಳಬಹುದಾಗಿದೆ" ಎಂಬ ಮೆಚ್ಚುಗೆಯನ್ನೂ ಪಡೆದಿದೆ! ಆರು ವರ್ಷಗಳ ನಂತರ ೧೯೮೩ರಲ್ಲಿ 'ವಚನ ನಂದನ' ಎಂಬ ಮತ್ತೊಂದು ವಚನ ಸಂಕಲನವನ್ನು ಪುರಾಣಿಕರು ಪ್ರಕಟಿಸಿದರು. ಅದಕ್ಕೆ ಮುನ್ನುಡಿ ಬರೆಯುತ್ತಾ ಪ್ರೊಫೆಸರ್ ತಿಪ್ಪೇರುದ್ರ ಸ್ವಾಮಿಯವರು "ಶರಣ ಜೀವನದ ಪ್ರತಿಭೆಯನ್ನು ಅಂತೆಯೇ ಆಧುನಿಕ ಪರಿಸರಕ್ಕೆ ಒಡ್ಡಿಕೊಂಡ ವಿಚಾರಶೀಲ ಮನಸ್ಸಿನ ಪರಿಭಾವನೆಯ ಪ್ರಭಾವವನ್ನೂ ಇವರ ವಚನಗಳಲ್ಲಿ ಕಾಣುತ್ತೇವೆ" ಎಂದು ಹೇಳಿದರು. ಈಚೆಗೆ (೧೯೯೨) ಪುರಾಣಿಕರು ತಮ್ಮ ಮೂರನೆಯ ಸಂಕಲನ 'ವಚನಾರಾಮ'ವನ್ನು ಪ್ರಕಟಿಸಿದ್ದಾರೆ (ಪ್ರಕಾಶಕರು: ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿ, ನರೇಗಲ್ಲ; ಪುಟಗಳು-ಡೆಮ್ಮೈ ಆಕಾರದ ೨೨+೨೦೪; ಬೆಲೆ-ಐವತ್ತು ರೂಪಾಯಿ).

'ವಚನ', 'ವಚನಕಾರ' ಎಂಬ ಮಾತುಗಳನ್ನು ಇಪ್ಪತ್ತನೇ ಶತಮಾನದ ಕೃತಿಗಳಿಗೆ, ಕೃತಿಕಾರರಿಗೆ ಬಳಸಲು ಕೆಲವರು ಇಷ್ಟಪಡದಿದ್ದರೂ, ಅಂದಿನ ವಚನಗಳೇ ಬೇರೆ, ಇಂದಿನ ವಚನಗಳೇ ಬೇರೆ ಎಂದು ವಾದ ಮಾಡುತ್ತಿದ್ದರೂ, ವಚನ ಇಂದಿನ ಒಂದು ಸಾಹಿತ್ಯ ಪ್ರಕಾರವಾಗಿ ಸ್ಥಾಪಿತವಾಗಿದೆ ಎಂಬುದನ್ನು ಕಡೆಗಣಿಸುವಂತಿಲ್ಲ. ಅನೇಕ ಸಾವಿರ ವಚನಗಳು ನಮ್ಮ ಕಾಲದಲ್ಲಿ ರಚಿತವಾಗಿವೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಸೇರಿದಂತೆ ಬಗೆ ಬಗೆಯ ಬಹುಮಾನಗಳನ್ನು ಗಳಿಸಿವೆ. ಎಲ್ಲ ಪ್ರಕಾರಗಳಲ್ಲೂ ಇರುವಂತೆ ಇಂದಿನ ವಚನಗಳಲ್ಲಿಯೂ 'ಒಳ್ಳೆಯ, ಕೆಟ್ಟ, ಏನೂ ಅಲ್ಲದ' ವಚನಗಳಿವೆ. ಅವುಗಳ ವರ್ಣ, ನಾದ, ರುಚಿಗಳು ಬಹು ಬಗೆಯುವಾಗಿವೆ. ಇಂದಿನ ಕೆಲವು ಲೇಖಕರಿಗೆ ವಚನಗಳನ್ನು ಬರೆಯುವುದು ಒಂದು ಫ್ಯಾಷನ್ ಆಗಿದೆ! ಕೆಲವರಿಗೆ ಅದು ನಿಜವಾದ ಒಂದು ಅಭಿವ್ಯಕ್ತಿ ಮಾಧ್ಯಮವಾಗಿದೆ. ಜಚನಿ, ರಂಗಣ್ಣ, ಪರಮೇಶ್ವರಭಟ್ಟ, ಬಣಕಾರ ಮೊದಲಾದವರು ಈ ಪ್ರಕಾರದಲ್ಲಿ ಹೆಚ್ಚಿನ ಕೃಷಿ ಮಾಡಿದ್ದಾರೆ. ಸಿದ್ಧಯ್ಯ ಪುರಾಣಿಕರಾದರೂ ಇದೇ ಸಾಲಿನಲ್ಲಿ ಬರುತ್ತಾರೆ. ಅವರ ಮೂರು ಸಂಕಲನಗಳಲ್ಲಿ ಸಾವಿರದ ಐನೂರಕ್ಕಿಂತ ಹೆಚ್ಚು ವಚನಗಳು ಸೇರಿವೆ. ಇದು ತುಂಬ ದೊಡ್ಡ ಕೆಲಸವೆಂದೇ ನನ್ನ ಭಾವನೆ. ಈ ವಚನಗಳಲ್ಲಿ ಕಲಾತ್ಮಕ ದೃಷ್ಟಿಯಿಂದ ಸುಮಾರು ಮುನ್ನೂರನ್ನು ಆಯ್ದು ಒಂದು ಪ್ರತ್ಯೇಕ ಸಂಪುಟವನ್ನು ಪ್ರಕಟಿಸಿದರೆ ಅದು ಆಧುನಿಕ ಕನ್ನಡದ ಶ್ರೇಷ್ಠ ಅಭಿವ್ಯಕ್ತಿಯ ಗ್ರಂಥಗಳಲ್ಲಿ ನಿಶ್ಚಯವಾಗಿಯೂ ಒಂದೆನಿಸುತ್ತದೆ. ಆ ಕೆಲಸವನ್ನು ಯಾರಾದರೂ ಮಾಡಿಯಾರೆಂದು ನಿರೀಕ್ಷಿಸುತ್ತೇನೆ. ಅದು ಆದಾಗ ಆಧುನಿಕ ಅನುಭಾವಿಯೊಬ್ಬರನ್ನು ಸಮರ್ಥವಾಗಿ ಪರಿಚಯಿಸಿದಂತಾಗುತ್ತದೆ.

'ವಚನಾರಾಮ'ದಲ್ಲಿ ಐದುನೂರ ಒಂದು ವಚನಗಳಿವೆ. ಪುರಾಣಿಕರ ಮೂರೂ ವಚನ ಸಂಪುಟಗಳನ್ನು ಒಟ್ಟಾಗಿ ಪರಿಶೀಲಿಸಿದರೆ, 'ವಚನೋದ್ಯಾನ'ದಲ್ಲಿ ಅವರ ಅತ್ಯುತ್ತಮ ಪ್ರತಿಭೆ ತೋರಿಸಿಕೊಂಡಿರುವುದನ್ನು ಯಾರಾದರೂ ಗಮನಿಸಬಹುದು. ಮತ್ತೆರಡು ಸಂಕಲನಗಳಲ್ಲಿ ಅದು ಆ ಪ್ರಮಾಣದಲ್ಲಿ ಹರಳುಗಟ್ಟಿಲ್ಲವೆಂದೇ ಹೇಳಬೇಕು. ಒಬ್ಬ ಲೇಖಕ ಎಷ್ಟೇ ದೊಡ್ಡ ಪ್ರತಿಭಾವಂತನಾಗಿದ್ದರೂ, ಅವನ ಎಲ್ಲ ಕೃತಿಗಳೂ ಒಂದೇ ಮಟ್ಟದವಾಗಿರುತ್ತವೆಂದು ಹೇಳಲು ಬರುವುದಿಲ್ಲ. ಏರಿಳಿತಗಳು ಸಾಮಾನ್ಯವಾಗಿರುತ್ತವೆ. "'ವಚನೋದ್ಯಾನ'ದಲ್ಲಿ ಪ್ರಖರವಾಗಿ ಬೆಳಗಿದ ಪ್ರತಿಭಾಶಿಖೆ, ನಡುವೆ 'ವಚನ ನಂದನ'ದಲ್ಲಿ ತುಸು ಅವನತವಾದಂತೆ ತೋರಿ, ಮತ್ತೆ ಈ 'ವಚನಾರಾಮ'ದಲ್ಲಿ ಊರ್ಧ್ವಮುಖಿಯಾಗಿ ಪ್ರಜ್ವಲಿಸಿದೆ" ಎಂದು ಮುನ್ನುಡಿಕಾರರಾದ ಸಿ.ಪಿ.ಕೆ. ಯವರು ಹೇಳುತ್ತಾರೆ. ಕೃತಿಶ್ರೇಣಿ ಎನ್ನುವುದು, ಬೆಟ್ಟಸಾಲಿನಂತೆ, ಅಲ್ಲಿ ಎಲ್ಲರೂ ಶಿಖರ ಪ್ರಾಯವಾಗಿರುವುದು ಸಾಧ್ಯವಿಲ್ಲ.

ವಚನ ಸಾಹಿತ್ಯವನ್ನು ಮೊದಲಿನಿಂದಲೂ ಆಳವಾಗಿ ಅಧ್ಯಯನ ಮಾಡಿರುವ ಪುರಾಣಿಕರಿಗೆ ಆ ಪ್ರಕಾರ ಕೈವಶವಾಗಿದೆ. ಈ ವಚನಗಳನ್ನು ಓದುತ್ತಿದ್ದಂತೆಯೆ ಅದು ಸ್ಪಷ್ಟಗೊಳ್ಳುತ್ತ ಹೋಗುತ್ತದೆ. ವಚನಗಳ ವಸ್ತುವಾದರೋ ಸಮಕಾಲೀನವಾದದ್ದು. ವ್ಯಾಪಕವಾದ ಬದುಕು ಇಲ್ಲಿ ಮೈ ಚೆಲ್ಲಿದೆ. ಬದುಕಿನ ಎಲ್ಲ ಸಮಸ್ಯೆಗಳಿಗೂ ಪುರಾಣಿಕರು ಪ್ರತಿಸ್ಪಂದಿಸಿದ್ದಾರೆ. ಯಾವ ಕಾರಣಕ್ಕೂ ಅವರು ನಿರಾಶರಾಗುವುದಿಲ್ಲ. ಮನಸ್ಸಿನ ಸ್ವಸ್ಥತೆಯನ್ನು ಕಳೆದುಕೊಳ್ಳುವುದಿಲ್ಲ. ಮೌಲ್ಯಗಳಲ್ಲಿನ ಭರವಸೆಯನ್ನೂ ಕಳೆದುಕೊಳ್ಳುವುದಿಲ್ಲ. ಮನುಷ್ಯನ ಬದುಕು ಒಂದು ರಣರಂಗ. ಒಳಗು ಹೊರಗುಗಳಿಗೆ ಅಲ್ಲಿ ಸತತ ಹೋರಾಟ. "ಹೊರಗೆ ಬದುಕಿನ ಹೋರಾಟ, ಒಳಗೆ ಬಯಕೆಗಳ ಹೋರಾಟ" ಎಂದು ಅವರು ಒಂದು ಕಡೆ ಹೇಳುತ್ತಾರೆ. ಇಲ್ಲಿನ ಸ್ವಾರಸ್ಯವೆಂದರೆ ಈ ಹೋರಾಟಗಳು ತಮ್ಮಷ್ಟಕ್ಕೇ ನಡೆಯುತ್ತವೆ. ಅವು ಎಂದೂ ದ್ವಂದ್ವವನ್ನುಂಟು ಮಾಡುವುದಿಲ್ಲ. ಈ ವಚನ ಸಂವಾದದಲ್ಲಿ ಬದುಕಿನ ಒಳ್ಳೆಯತನಗಳು ಗರಿಗಟ್ಟಿಕೊಂಡಿವೆ.

ಪುರಾಣಿಕರ ವಚನಗಳಲ್ಲಿ ವಿಶ್ವಮಾನವ ದೃಷ್ಟಿ ತಾನೇ ತಾನಾಗಿ ಕಾಣಿಸಿಕೊಳ್ಳುತ್ತದೆ. "ಇರಾಕ್ ಇರಾಣಗಳಲ್ಲಿ ಮದ್ದು ಸಿಡಿದರೆ ಇಲ್ಲಿ ನಮ್ಮ ಉಸಿರುಗಟ್ಟುತ್ತದೆ; ಜರ್ಮನಿಯಲ್ಲಿ ಬರ್ಲಿನ್‌ಗೋಡೆ ಬಿದ್ದರೆ ಇಲ್ಲಿ ಸದ್ದಿಲ್ಲದೆ ಬುದ್ಧಿ ಬದಲಾಗುತ್ತದೆ." ಮನುಷ್ಯ ಮೊದಲು ಎಲ್ಲಿ ಹುಟ್ಟಿದನೋ, ಇವತ್ತು ಜಗತ್ತಿನಾದ್ಯಂತ ಮನುಸಂತಾನ; ಅವನು ಹುಟ್ಟಿಸಿದ್ದು, ಬೆಳೆಸಿದ್ದು ಅಷ್ಟಿಷ್ಟಲ್ಲ;

ಆದರೆ ಅವನೇ ಹಂಸಗೀತೆ ಹಾಡಬಾರದು ಎಂದು ಒಂದು ವಚನ ಹೇಳುತ್ತದೆ. ವಿಡಂಬನೆಯ ಈ ಮಾದರಿ ನೋಡಿ: "ಇಂದು ಪತ್ರಿಕೆ ಬರಲಿಲ್ಲ. ಸಾವುಗಳ ಸುದ್ದಿಯನ್ನೋದದೆ ಜೀವಕ್ಕೆ ಬೇಸರಾಯಿತು-ಸ್ವತಂತ್ರಧೀರ ಸಿದ್ಧೇಶ್ವರ." ತೋರಿಕೆಯ ಧರ್ಮದ ಬಗೆಗೆ: "ನಿನ್ನನ್ನು ಅಂಗದ ಮೇಲೆ ಧರಿಸಿ ಫಲವೇನು-ಮನ ಲಿಂಗವಾಗದನ್ನಕ್ಕ ?" ವಸ್ತು ವೈವಿಧ್ಯ ಸಾಧಿಸಿರುವಷ್ಟು ಅಭಿವ್ಯಕ್ತಿ ವೈಖರಿ ಸಾಧಿಸಿಲ್ಲ ಎಂದು ಪುರಾಣಿಕರು ಒಂದೆಡೆ ಹೇಳಿಕೊಂಡಿದ್ದಾರೆ. ಅದು ಕೇವಲ ಸೌಜನ್ಯದ ಮಾತಷ್ಟೇ ಎಂದು ತಿಳಿಯಬಹುದು. ಅಭಿವ್ಯಕ್ತಿಯ ವೈಖರಿಯಲ್ಲಿಯೂ ಇಲ್ಲಿ ಸಾಕಷ್ಟು ಸಾಧನೆಯಿದೆ. ತಮ್ಮ ಸಾಹಿತ್ಯದಲ್ಲಿಯೂ, ಬದುಕಿನಲ್ಲಿಯೂ ಪುರಾಣಿಕರು ಪ್ರಾಚೀನ ವಚನಗಳ ಪ್ರಭಾವವನ್ನು ಹೊಂದಿದ್ದಾರೆಂಬುದರಲ್ಲಿ ಸಂಶಯವಿಲ್ಲ. ಸೂಕ್ತಿಪ್ರಾಯದ ಹಲವಾರು ಮಾತುಗಳನ್ನು ಇಲ್ಲಿ ನೋಡಬಹುದು. ಯಾವ ವಚನ ತೆರೆದರೂ ಇದಕ್ಕೆ ಸಾಕ್ಷ್ಯ ದೊರೆಯುತ್ತದೆ-ಒಂದಲ್ಲ ಒಂದು ರೀತಿಯಿಂದ. ತಮ್ಮ ಕೊರತೆಗಳೇನು, ಸೀಮಿತಗಳೇನು ಎಂಬುದು ಪುರಾಣಿಕರಿಗೆ ಚೆನ್ನಾಗಿ ತಿಳಿದಿದೆ. ಅದನ್ನು ಹೇಳಿಕೊಳ್ಳಲು ಅವರಿಗೆ ಸಂಕೋಚವಿಲ್ಲ. "ಈ ವ್ಯರ್ಥಾಲಾಪಕ್ಕೂ ಅರ್ಥ ಬಂದೀತೂಮ್ಮೆ", "ಎನ್ನ ವಚನ ಬಂಧ ಸಡಿಲಾದುದೆನ್ನುವರಯ್ಯ", "ಆದ್ಯರ ವಚನಗಳಿಗೆ ಆಧುನಿಕ ವಚನಗಳು ಸರಿಯೆ ?" - ಮುಂತಾದ ಮಾತುಗಳಲ್ಲಿ ಪುರಾಣಿಕರ ಚಿಕಿತ್ಸಕ ಹಾಗೂ ಶೋಧಕ ಮನಸ್ಸನ್ನು ಕಾಣಬಹುದು.

ಜಗತ್ತಿನಲ್ಲಿ ತೀರ ಹೊಸತು ಎನ್ನುವುದು ಯಾವುದು ? ನಾವು ನಮಗೆ ತಿಳಿದೋ ತಿಳಿಯದೆಯೋ, ಹಿಂದಿನ ಎಲ್ಲ ಆಲೋಚನೆಯ ಭಾರವನ್ನೂ ಹೊತ್ತಿದ್ದೇವೆ. ಆ ಭಾರದಿಂದ ತಪ್ಪಿಸಿಕೊಳ್ಳುವುದು ಸುಲಭವಲ್ಲ. "ಕೈತೊಳೆದು ಮುಟ್ಟಬೇಕಾದ ಗ್ರಂಥಗಳ ಕೊಡು ತಂದೆ-ಮುಟ್ಟಿ ಕೈತೊಳೆಯಬೇಕಾದ ಕೃತಿಗಳನ್ನಲ್ಲ" ಎಂದು ಪುರಾಣಿಕರು ಪ್ರಾರ್ಥಿಸುತ್ತಾರೆ. ಪುರಾಣಿಕರಿಗೆ ತಿಳಿದಿರಲಾರದು, ಈ ವರ್ಗೀಕರಣ ದಿವಂಗತ ಜಿ.ಪಿ. ರಾಜರತ್ನಂ ಅವರದ್ದು ! ಆದರೆ ಒಳ್ಳೆಯ ಮಾತುಗಳನ್ನು ಎಷ್ಟು ಸಲ ಕೇಳಿದರೂ ಹಳತಾದಾವೆ ? 'ವಚನಾರಾಮ' ಈಚಿನ ವಚನ ಸಂಕಲನಗಳಲ್ಲಿ ಅತ್ಯುತ್ತಮವಾದುದಾಗಿದೆ. ●

---

**ತ**ಮ್ಮದೇ ಆದ ಒಂದು ಪ್ರಪಂಚವನ್ನು ಸೃಷ್ಟಿಸಿಕೊಂಡು. ಅದರಲ್ಲಿ ಸದಾ ತನ್ಮಯರಾಗಿ ಎಲ್ಲವನ್ನೂ ಮರೆಯುವ ಜಗತ್ತಿನ ಕೆಲವು ಮರೆವು

ಮರದಿಂದ ಕೆಳಗೆ ಬೀಳುವ ಸೇಬು ಹಣ್ಣನ್ನು ನೋಡಿ ಗುರುತ್ವಾಕರ್ಷಣ ಶಕ್ತಿಯ ಅಪೂರ್ವ ಶೋಧವನ್ನು ಮಾಡಿದ ನ್ಯೂಟನರೂ ಒಬ್ಬ ಮರ

ಕೊಂಡು ಆತ ನುಡಿದ- 'ಬಹಳ ಸಮಯ ಕಳೆಯಿತು, ಅಲ್ವೇ ?' ಅದಕ್ಕೆ ಅವರು - 'ಹೌದು, ನನಗೂ ಹಾಗೆಯೇ ಅನಿಸುತ್ತದೆ' ಎಂದು ಉತ್ತರ